ಸರಿ ಇದೆ ಎಂದು ಸರ್ಕಾರಕ್ಕೆ ಮನವರಿಕೆ ಆದಾಗ ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದರೆ ತಮಗೆ ಅದು ಸರಿಯಾಗಿಲ್ಲ. ಇಲ್ಲಿ ಅನ್ಯಾಯ ಆಗಿವೆ ಎಂದು ಮನವರಿಕೆಯಾದಾಗ ತಕ್ಷಣ ತಾವು ಅದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಿ. ಆದ್ದರಿಂದ ತಾವು ಇವತ್ತೋ ಅಥವಾ ನಾಳೆಯೋ ಅವರನ್ನು ಕರೆಸಿ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳಬಹುದು.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ರಾಜ್ಯ ಸಚಿವರು ಏನು ಇದ್ದಾರೆ ಅವರಿಗೆ ಸಂಪೂರ್ಣವಾದ ಅಧಿಕಾರವನ್ನು ನಾನು ಈ ವಿಷಯದಲ್ಲಿ ಕೊಟ್ಟಿದ್ದೇನೆ. ಅವರು ಆ ಭಾಗದ ಎರಡೂ ಮನೆಯ ಶಾಸಕರುಗಳನ್ನು ಕರೆಸಿ ನಮ್ಮ ಅಧಿಕಾರಿಗಳನ್ನು ಕರೆಸಿ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಅವುಗಳನ್ನು ಸರಿಪಡಿಸಬೇಕು ಎನ್ನತಕ್ಕಂಥ ಆದೇಶವನ್ನು ನಾನು ಅವರಿಗೆ ಕೊಟ್ಟಿದ್ದೇನೆ. ಅವರು ಇವತ್ತೋ ನಾಳೆಯೋ ಕರೆಯುತ್ತಾರೆ.

(3) **ಬೆಳಗಾಂನ ಶ್ವೇತ ಭವನದಲ್ಲಿ ಬಾರ್ ನಡೆಸುತ್ತಿರುವುದಕ್ಕೆ ವಿರೋಧ**

ಶ್ರೀ ಬಾಬಾಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈಗ 4 ವರ್ಷಗಳಿಂದ ಬೆಳಗಾಂ ಜಿಲ್ಲೆಯ ಬಸ್ ಸ್ಟ್ಯಾಂಡ್ ಪಕ್ಕದಲ್ಲಿರುವ ರೈತ ಭವನ ವಿಚಾರಕ್ಕೆ ಸಂಬಂಧಪಟ್ಟಹಾಗೆ ಸರ್ಕಾರ ಒಂದು ಭರವಸೆ ಕೊಟ್ಟಿತ್ತು. ಅಲ್ಲಿ ಇವತ್ತು ಬಾರ್ ನಡೆಸುತ್ತಾ ಇದ್ದಾರೆ. ಅಲ್ಲಿ ರೈತರಿಗೆ ಬಸ್ಸು ತಪ್ಪಿದರೆ ಇಳಿದುಕೊಳ್ಳುವುದಕ್ಕೆ ರೈತ ಭವನ ಎಂದು ಕಟ್ಟಿ ಅಲ್ಲಿ ಬಾರ್ ನಡೆಸುತ್ತಾ ಇದ್ದೀರಿ. ಇದು ಸರ್ಕಾರದ ಪರವಾನಿಗೆಯಿಂದ ನಡೆಸುತ್ತಿದೆಯೋ ಇಲ್ಲವೋ ಎನ್ನುವುದು ಅರ್ಥವಾಗುತ್ತಿಲ್ಲ. ಲೀಸ್ಗೆ ಕೊಡುವಾಗ ಅಗ್ರಿಮೆಂಟ್ ಆಗಿದೆ. ಅವರು ಕಂಡೀಷನ್ಸ್ ವಿನಾದರೂ ವೈಲೇಟ್ ಮಾಡಿದರೆ ಆ ಕೂಡಲೇ ಸರ್ಕಾರ ಸ್ವಾಧೀನಪಡಿಸಿಕೊಳ್ಳುತ್ತೇವೆ ಎಂದು ಅಗ್ರಿಮೆಂಟಿನಲ್ಲಿ ಪೇಳಿದ್ದೀರಿ. ಈ ತನಕ ಅಲ್ಲಿ ಬಾರ್ ನಡೆಸುತ್ತಾ ಇದ್ದಾರೆ. ರೈತರು ಅಲ್ಲಿ ವಿನೋ ಬಸ್ಸು ತಪ್ಪಿದರೆ ಅಲ್ಲಿ ಮಲಗಿಕೊಳ್ಳುವುದಕ್ಕೆ ವಸತಿ ಗೃಹ ಮಾಡುತ್ತೇವೆ; ಸಾಯಿಲ್ ಟೆಸ್ಟಿಂಗ್ ಲ್ಯಾಬೋರೇಟರಿ ಮಾಡುತ್ತೇವೆಂದು ಎನ್ನತಕ್ಕಂಥಾದ್ದು ಇತ್ತು; ಕೋಟ್ಯಾಂತರ ರೂಪಾಯಿ ಕಿಮ್ಮತ್ತಿನ ನಿವೇಶನ ಕೊಟ್ಟು ಆಗಿದೆ. ಇಲ್ಲಿಯವರೆಗೂ ಏಕೆ ಕ್ರಮ ತೆಗೆದುಕೊಂಡಿಲ್ಲ? ಅದಕ್ಕೆ ಒಂದು ರೂಮರ್ ಇದೆ. ಆ ಕಡೆ ಈ ಕಡೆ ಮಾತನಾಡುತ್ತಾರೆ. ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಡೆಯುತ್ತಿದೆ ಅದನ್ನು ಮುಚ್ಚಿ ಹಾಕುವಂತಹ ಪ್ರಯತ್ನ ಮಾಡುತ್ತಿದ್ದಾರೆ ಎಂದು. ಅದರ ಬಗ್ಗೆ ಮಾನ್ಯ ಅಧ್ಯಕ್ಷರು ಸರ್ಕಾರದಿಂದ ಉತ್ತರ ಕೊಡಿಸಬೇಕು. ಅದು ದೊಡ್ಡ ನಿವೇಶನ 1-16 ಗುಂಟೆ ಸರ್ಕಾರ ಕೊಟ್ಟಿದೆ. ಒಬ್ಬ ಪ್ರೈವೇಟ್ ಪಾರ್ಟಿಗೆ ಕೊಟ್ಟಿದ್ದಾರೆ. ಅದು ಈಗ ಬಾರ್ ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಸರ್ಕಾರ ತಪ್ಪಗಾಗಿದೆ. ಇದರ ಬಗ್ಗೆ ಉತ್ತರ ಕೊಡುವವರು ಯಾರು? ಎಂಬುದು ಅರ್ಥವಾಗುತ್ತಿಲ್ಲ. ತಾವು ಸುಮ್ಮನೆ ಕುಳಿತುಕೊಂಡಿದ್ದೀರಿ. ಅವರು ಹೇಳುತ್ತಾ ಇದ್ದಾರೆ.

ಶ್ರೀ ಬಾಬಾಗೌಡಪಾಟೀಲ್ : ಸರ್ಕಾರದ ಆಸ್ತಿ ಅಂದರೆ ಯಾರು ಬೇಕಾದರೂ ಹೇಗೆ ಬೇಕಾದರೂ ಉಪಯೋಗ ಮಾಡಬಹುದೇ ? ಯಾವ ಇಲಾಖೆಗೆ ಇದು ಬರುತ್ತದೆಂದು ಇದುವರೆಗೂ ಗೊತ್ತಿಲ್ಲ. ಒಮ್ಮೆ ನಮ್ಮ ಮಾನ್ಯಚಿಕ್ಕೇಗೌಡರು ಮಂತ್ರಿಗಳಾಗಿದ್ದಾಗ ಹೇಳಿದರು ಇದು ನನ್ನ ಖಾತೆಗೆ ಬರುವುದಿಲ್ಲ ಎಂದು. ಒಮ್ಮೆ ಲೋಕೋಪಯೋಗಿ ಇಲಾಖೆ ಮಂತ್ರಿಗಳು ನನ್ನ ಖಾತೆಗೆ ಬರುವುದಿಲ್ಲ ಎಂದು ಹೇಳಿದರು. ಎಲ್ಲರೂ ಹಾಗೆ ಹೇಳುತ್ತಿದ್ದಾರೆ. ಉದ್ದೇಶಪೂರ್ವಕವಾಗಿಯೇ ಇದನ್ನು ಯಾರೂ ವಹಿಸಿಕೊಳ್ಳುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್: ಇದು ಎರಡು ಸಾರಿ ಚರ್ಚೆ ಆಗಿದೆ. ಮಂತ್ರಿಗಳು ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಇದು ನನ್ನದಲ್ಲ ನನ್ನದಲ್ಲ ಎಂದರೆ ಯಾರಿಗೆ ಇದು ಬರುತ್ತದೆ?

ಶ್ರೀ ಬಾಬಾಗೌಡ ಪಾಟೀಲ್ : ಕಳೆದಸಾರಿ ಉತ್ತರ ಕೊಟ್ಟಿದ್ದರು. ಇಲ್ಲಾ ಕ್ರಮ ಕೈಗೊಳ್ಳುತ್ತೇವೆ. ಧಾರವಾಡ ಚೀಫ್ ಇಂಜಿನೀಯರ್ಗೆ ಕ್ರಮ ಕೈಗೊಳ್ಳುತ್ತೇವೆ ಎಂದು ಲಿಖಿತ ಮೂಲಕ ಒಂದು ಉತ್ತರ ಕೊಟ್ಟರು. ನಾಲ್ಕು ವರ್ಷಗಳಿಂದ ಇದುವರೆಗೆ ಇನ್ನೂ ಕ್ರಮ ಕೈಗೊಂಡಿಲ್ಲ. ಇದು ಯಾರ ಖಾತೆಗೆ ಬರುತ್ತದೆಂಬುದನ್ನು ಹೇಳಿಬಿಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇಡೀ ಸರ್ಕಾರ ಗರ ಬಡಿದಂತೆ ಕುಳಿತಿದೆ. ಯಾರಾದರೂ ಒಬ್ಬರು ಹೇಳಿ ಸ್ವಾಮಿ. 2 ಸಾರಿ ಭರವಸೆ ಕೊಟ್ಟಿದ್ದೀರಿ. 4 ವರ್ಷ ಆದರೂ ಕ್ರಮ ಕೈಗೊಂಡಿಲ್ಲ. ಈಗ ಅಲ್ಲಿ ಯಾರು ಬಾರ್ ನಡೆಸುತ್ತಾ ಇದ್ದಾನೆ ಅವನು ನನ್ನದು ಎಂದು ಕುಳಿತಿದ್ದಾನೆ. ಈ ಸರ್ಕಾರ ನಿಮ್ಮದೋ ಅವನದ್ದೋ ಎಂಬುದು ತೀರ್ಮಾನ ಆಗಲಿ.

ಶ್ರೀ ಬಾಬಾಗೌಡ ಪಾಟೀಲ್ : ಮಾನ್ಯ ಕೃಷಿ ಸಚಿವರು ಇಲ್ಲಿಗೆ ಬಂದಿದ್ದಾರೆ. ಬೆಳಗಾಂ ಬಸ್ಟಿಲ್ಡಾಣದ ಪಕ್ಕದಲ್ಲಿರುವುದು ರೈತ ಭವನವೋ ಅಥವಾ ಬಾರೋ ಉತ್ತರ ಕೊಡಿ.

ಶ್ರೀ ಎಸ್.ಎಂ. ಕೃಷ್ಣಾ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ವಿಚಾರವನ್ನು ನಾನು ಅಲ್ಲಿ ಕುಳಿತಿದ್ದಾಗ ಪ್ರಸ್ತಾವನೆ ಮಾಡಿದ್ದರು. ಅದು ಇನ್ನೂ ನನಗೆ ಜ್ಞಾಪಕ ಇದೆ. ಆಗ ನಾನೇ ಸರ್ಕಾರಕ್ಕೆ ನಿರ್ದೇಶನ ಕೊಟ್ಟಿದ್ದೆ ಇದು ಯಾರ ಪದ್ದುಬಸ್ತಿಗೆ ಬರುತ್ತದೆ ಎನ್ನತಕ್ಕಂಥ ತೀರ್ಮಾನ ಮಾಡಿ ಸದನಕ್ಕೆ ಅನಂತರ ಉತ್ತರ ಕೊಡಿ ಎಂದು. ಈಗ ನಾವು ಮತ್ತೆ ಮಾರ್ಚ್ 17ನೇ ತಾರೀಖು ಸೇರುತ್ತಾ ಇದ್ದೇವೆ. ಅಷ್ಟರೊಳಗೆ ಇದು ಯಾರ ಪದ್ದುಬಸ್ತಿಗೆ ಬರುತ್ತದೆ ಎನ್ನುವುದನ್ನು ತಿಳಿದು ಕರಾರುವಾಕ್ಕಾಗಿ ಉತ್ತರವನ್ನು ಇದರ ಬಗ್ಗೆ ಕೊಡುತ್ತೇವೆ.

ಶ್ರೀ ವಾಟಾಳ್ ನಾಗಾರಾಜ್ : ಇದು ತಪ್ಪಿಸಿಕೊಳ್ಳತಕ್ಕಂಥ ಉತ್ತರ. ಇದು ತಮಗೆ ಗೊತ್ತಿದೆ. ತಾವು ಅಧ್ಯಕ್ಷರಾಗಿದ್ದಾಗಲೂ ಬಂತು ಇದು. ಇವರು ಅಧ್ಯಕ್ಷರಾದ ಮೇಲೂ ಬಂದಿದೆ. ಈಗ ಒಂದು ಸರ್ಕಾರ ಎಂದು ಇದೆಯಲ್ಲಾ. ನಿಮ್ಮದು ಸರ್ಕಾರ ಎಂದು ನಾವೆಲ್ಲಾ ನಂಬಿಕೊಂಡಿದ್ದೇವೆ. ಜನ ನಂಬಿದ್ದಾರೆ. ಆ ರೈತ ಭವನ ನಿಮ್ಮದು ಅಲ್ಲ ಅಂತಾದರೂ ಹೇಳಿಬಿಡಿ. ನೀವು ನೇರವಾಗಿ ನಮ್ಮದು ಅಲ್ಲ ಎಂದು ಹೇಳಿದರೆ ನಾವು ಅವನಿಗೆ ಪರವಾನಿಗೆ ಕೊಟ್ಟುಬೇಡೋಣ, ಹೋಗಪ್ಪ ಮಾಡಿಕೊಂಡು ಬದುಕಿಕೋ ಎಂದು ಹೇಳಿಬಿಡೋಣ. ಆದರೆ ಅದು ಯಾವುದೂ ಇಲ್ಲವಲ್ಲಾ, ಏನೋ ಒಂದು ಹೇಳುತ್ತಿದ್ದೀರಿ. 17ನೇ ತಾರೀಖು ಆದ ನಂತರ ಕರಾರುವಕ್ಕಾಗಿ ಉತ್ತರ ಕೊಡುತ್ತೇವೆಂದು ಹೇಳುತ್ತಿದ್ದೀರಲ್ಲಾ, ತಮ್ಮ ಒಂದು ಪ್ರಾಮಾಣಿಕತೆ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ಇದುವರೆಗೂ ಇದರ ಬಗ್ಗೆ ಸರ್ಕಾರಕ್ಕೆ ಇರತಕ್ಕಂಥ ಮಾಹಿತಿ ಏನು ಎನ್ನತಕ್ಕಂಥಾದ್ದನ್ನು ಸಂಬಂಧಪಟ್ಟಂತಹ ಸಚಿವರು ತಿಳಿಸಬೇಕು. ಸಂಬಂಧಪಟ್ಟ ಸಚಿವರು ತಮಗೆ ಗೊತ್ತಿಲ್ಲ ಎಂದು ತಲೆ ಅಲ್ಲಾಡಿಸುತ್ತಿದ್ದಾರೆ ಇದು ವ್ಯವಸಾಯ ಇಲಾಖೆಗೆ ಸೇರಿದ್ದೋ ಅಥವಾ ನೀರಾವರಿ ಇಲಾಖೆಗೆ ಸೇರಿದ್ದೋ ಎಂಬುದು ಗೊಂದಲದಲ್ಲಿ ಇದೆ.

(4) ನಾಗಮಂಗಲ ತಾಲ್ಲೂಕಿನಲ್ಲಿ ತೆಂಗಿನ ಮರಗಳಿಗೆ ಕಪ್ಪು ತಲೆಹುಳದ ರೋಗ.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ನಾಗಮಂಗಲ ತಾಲ್ಲೂಕಿನಲ್ಲಿ ತೆಂಗಿನ ಮರಗಳಿಗೆ ಕಪ್ಪು ತಲೆ ಹುಳದ ರೋಗ ಹರಡಿ ಬಹಳ